ಶ್ರೇಷ್ಠ ಚಿಂತನೆಗಳ ಸಂಕಲನ ಗ್ರಂಥ

'Galaxy of Great Thoughts'

ನಮ್ಮ ಜೀವನದಲ್ಲಿ ಅನೇಕ ಬಾರಿ ಅರ್ಥಪೂರ್ಣವಾದ, ವಿಶೇಷ ಬೆಳಕನ್ನು ಚೆಲ್ಲುವ, ಬದುಕಿಗೆ ಹೊಸ ದಿಕ್ಕನ್ನು ತೋರಿಸಿಕೊಡುವ ಹೇಳಿಕೆಗಳು ಎದುರಾಗುತ್ತವೆ. ಅವುಗಳಲ್ಲಿ ಕೆಲವು ನಮ್ಮ ಮನಸ್ಸಿನಿಂದ ಮರೆಯಾಗುವುದೇ ಇಲ್ಲ. ಇನ್ನು ಕೆಲವು ಮರೆತುಹೋಗುತ್ತವೆ; ಆದರೆ ಸಂದರ್ಭ ಬಂದಾಗ ನೆನಪಾಗುತ್ತವೆ. ಅನೇಕ ಬಾರಿ ಇಂತಹ ಉತ್ತಮ ಮಾತು, ಹೇಳಿಕೆ, ಚಿಂತನೆಗಳನ್ನು ಎಲ್ಲೋ ಬರೆದಿಡಬೇಕು ಎಂದು ನಾವು ಹಂಬಲಿಸುತ್ತೇವೆ; ಬರೆದಿಡುತ್ತೇವೆ ಕೂಡ. ಆದರೆ ಹಾಗೆ ಬರೆದಿಟ್ಟದ್ದನ್ನು ನಾವು ಮತ್ತೆ ಓದುವುದು ಯಾವಾಗಲೋ! ಹೆಚ್ಚಾಗಿ ಅದನ್ನು ನಾವು ಓದುವುದೇ ಇಲ್ಲ. ಇನ್ನು ಕೆಲವೊಮ್ಮೆ ಒಳ್ಳೆಯ ಚಿಂತನೆಗಳನ್ನು ಓದಿ ಮನಸ್ಸಿನಲ್ಲಿ ಧರಿಸಿ ಇಟ್ಟುಕೊಳ್ಳೋಣ ಎಂದು ಬಯಸಿ ಹುಡುಕಾಡಿದರೆ, ಅವು ನಮಗೆ ಸುಲಭವಾಗಿ ಸಿಗುವುದೇ ಇಲ್ಲ. ಇಂಥ ಎಲ್ಲ ಗೊಂದಲಗಳನ್ನು ನಿವಾರಿಸಿಕೊಳ್ಳಲು ಒಂದು ಉತ್ತಮ ನುಡಿಮುತ್ತುಗಳ ಸಂಕಲನ ಗ್ರಂಥ ಸಹಕಾರಿಯಾಗಬಲ್ಲುದು. ನಾವು ಅನೇಕ ಬಗೆಯ ಹೇಳಿಕೆ, ನುಡಿಗಟ್ಟು, ಗಾದೆ, ಕವಿತೆ, ಚಿಂತನೆ ಇತ್ಯಾದಿಗಳನ್ನು ಒಳಗೊಂಡ ಹಲವು ಬಗೆಯ ಸಂಕಲನ ಗ್ರಂಥಗಳನ್ನು ನೋಡುತ್ತೇವೆ. ಆದರೆ ಅವುಗಳಲ್ಲಿ ನಾವು ಹುಡುಕುವ ಉತ್ತಮ ಹೇಳಿಕೆಗಳು ಎಷ್ಟರಮಟ್ಟಿಗೆ ಸಿಗುತ್ತವೆ ಎಂಬುದು ಮಾತ್ರ ಸಂದೇಹಾಸ್ಪದ. ಇದಕ್ಕೆ ಒಂದು ಅಪವಾದವೆಂಬಂತೆ, ಅತ್ಯುತ್ತಮ ಚಿಂತನೆ-ಹೇಳಿಕೆ-ನುಡಿಮುತ್ತುಗಳ ಸಂಕಲನ ಗ್ರಂಥವೇ, 'Galaxy of Great Thoughts'.



ಕೃತಿ: Galaxy of Great Thoughts
ಲೇಖಕರು : M. Varatharajulu
ಪ್ರಕಾಶನ : Bloomsbury India
ಪುಟ: 482 ಬೆಲೆ : 999/-

ಆಡಳಿತ ಹಾಗೂ ಕೃಷಿ ಅಭಿವೃದ್ಧಿ – ಈ ಕ್ಷೇತ್ರಗಳಲ್ಲಿ ವಿಶೇಷವಾಗಿ ದುಡಿದ ಶ್ರೀ ಎಂ. ವರದರಾಜುಲು ಅವರು ತಮ್ಮ ವಿಸ್ತಾರವಾದ ಓದು ಹಾಗೂ ಚಿಂತನೆಗಳ ಹಿನ್ನೆಲೆಯಿಂದ ಸಾಕಷ್ಟು ಶ್ರಮವಹಿಸಿ ರಚಿಸಿದ ಸಂಕಲನ ಗ್ರಂಥವಿದು. ಜಗತ್ತಿನ ವಿವಿಧ ಜ್ಞಾನಕ್ಷೇತ್ರಗಳು, ಇತಿಹಾಸ, ಕಾವ್ಯ, ಪುರಾಣ, ಆಧ್ಯಾತ್ಮಿಕತೆ, ತತ್ತ್ವಶಾಸ್ತ್ರ, ರಾಜಕಾರಣ, ಧರ್ಮಗಳು — ಹೀಗೆ ಅನೇಕ ಆಕರಗಳಿಂದ ಸಂಗ್ರಹಿಸಿದ ಅತ್ಯುತ್ತಮ ಚಿಂತನೆಗಳೆಲ್ಲ ಇಲ್ಲಿ ಸಂಗ್ರಹಗೊಂಡಿವೆ. ಇಲ್ಲಿನ ನುಡಿಮುತ್ತುಗಳನ್ನು ಜೋಡಿಸಿದ ರೀತಿ ಕೂಡ ವಿಶಿಷ್ಟವಾಗಿದೆ – ಇಂಗ್ಲಿಷಿನಲ್ಲಿ ಅಕಾರಾದಿಯಾಗಿ (alphabatically) ಕೆಲವು ಭಾವನೆ-ಚಿಂತನೆಗಳನ್ನು ಪ್ರಧಾನವಾಗಿಟ್ಟುಕೊಂಡು, ಆಯಾ ಭಾಗಗಳಲ್ಲಿ ವಿವಿಧ ಲೇಖಕರ (ಅಥವಾ ಲೇಖಕರಿಲ್ಲದಿದ್ದಲ್ಲಿ ಕೃತಿಗಳ, ಅಥವಾ ಅಜ್ಞಾತರ) ಹಲವು ಚಿಂತನೆಗಳನ್ನು ಸಂಗ್ರಹಿಸಲಾಗಿದೆ. 'ಉದ್ದೇಶ' ಎಂಬ ಉಪೋದ್ಘಾತದಲ್ಲಿ ಲೇಖಕರು ಹೀಗೆ ಬರೆಯುತ್ತಾರೆ: ''ಇಲ್ಲಿ ಸಂಗ್ರಹಿಸಲಾದ ಚಿಂತನೆಗಳನ್ನು ಒಂದು ಕ್ರಮದಲ್ಲಿ ಹೊಂದಿಸಿಲ್ಲ, ಅಥವಾ ಯಾವುದೇ ಉದ್ದೇಶವಿಟ್ಟುಕೊಂಡು ಸಂಗ್ರಹಿಸಿಲ್ಲ. ಇಲ್ಲಿನ ವಿಷಯಗಳನ್ನು ಮೂರು ಭಾಗಗಳಾಗಿ ವರ್ಗೀಕರಿಸಲಾಗಿದೆ: ೧) ಲೇಖಕರ, ಗ್ರಂಥದ ಅಥವಾ ಇತರ ಆಕರಗಳ ವಿವರ ದೊರೆತಿರುವ ಚಿಂತನೆಗಳು ೨) ಲೇಖಕರ, ಗ್ರಂಥದ, ಆಕರದ ಮಾಹಿತಿ ದೊರೆತಿಲ್ಲದ, ಅನಾಮಧೇಯ ಅಥವಾ ಅಜ್ಞಾತ ಆಕರಗಳು, ಹಾಗೂ ೩) ರಾಮಾಯಣ, ಮಹಾಭಾರತ, ಗೀತೆ ಮುಂತಾದ ಇತಿಹಾಸ, ಪುರಾಣ, ಮಹಾಕಾವ್ಯಗಳಿಂದ ಲಭಿಸುವ ನಿದರ್ಶನಗಳು.'' ಈ ಉಪೋದ್ಘಾತದಲ್ಲಿ ನೀಡಿರುವ ಇತರ ಮಾಹಿತಿಗಳನ್ನು ಮೊದಲೇ ಓದಿಕೊಂಡರೆ, ಈ ಗ್ರಂಥವನ್ನು ಇನ್ನಷ್ಟು ಚೆನ್ನಾಗಿ, ಉಪಯುಕ್ತವಾಗುವಂತೆ ಬಳಸಿಕೊಳ್ಳಬಹುದಾಗಿದೆ.

ಪ್ರಪಂಚದ ಅತ್ಯುನ್ನತ ಚಿಂತಕರ ಪ್ರಮುಖ ವಿಚಾರಧಾರೆಗಳೆಲ್ಲ ಇಲ್ಲಿ ಸಿಗುತ್ತವೆ. ಆಗಾಗ ಇವುಗಳನ್ನು ಓದಿ, ಮನನ ಮಾಡಿಕೊಂಡು, ನಮ್ಮ ಮನಃಪಟಲದಲ್ಲಿ ಅವುಗಳನ್ನು ಚಿತ್ರಿಸಿಕೊಳ್ಳಬಹುದು. ಶ್ರೀರಾಮಕೃಷ್ಣರ ಜೀವನ-ಸಂದೇಶಗಳಿಂದ ವಿಶೇಷವಾಗಿ ಪ್ರಭಾವಿತರಾಗಿದ್ದ ಲೇಖಕರು, ಈ ಗ್ರಂಥದುದ್ದಕ್ಕೂ ರಾಮಕೃಷ್ಣ ಭಾವಧಾರೆಗೆ ಅನುಗುಣವಾಗುವ ರೀತಿಯ ಚಿಂತನೆಗಳನ್ನು ಹೆಚ್ಚಾಗಿ ಕಲೆಹಾಕಿದ್ದನ್ನು ಕಾಣಬಹುದು. ವಿಶ್ವವಿಶಾಲ ಭಾವನೆ, ಭವ್ಯ ಆಧ್ಯಾತ್ಮಿಕತೆ, ಮಾನವೀಯತೆ, ಸಾಮರಸ್ಯ ಮುಂತಾದ ಮೌಲ್ಯಗಳನ್ನು ಈ ಕೃತಿಯ ಪುಟಪುಟದಲ್ಲೂ ಕಾಣಬಹುದು. ಅತ್ಯುತ್ತಮ ಮುದ್ರಣ, ವಿನ್ಯಾಸ, ರಕ್ಷಾಪುಟಗಳಿಂದ ಕೂಡಿದ ಈ ಗ್ರಂಥ ಅಂತರರಾಷ್ಟ್ರೀಯ ಮಾದರಿಯಲ್ಲಿ ಮುದ್ರಿತವಾಗಿದೆ. ಆರ್.ವಿ. ಸಂಸ್ಕೃತ ಅಧ್ಯಯನ ಕೇಂದ್ರದ ಹಿಂದಿನ ಮುಖ್ಯಸ್ಥರಾಗಿದ್ದ ಡಾ.ಎಸ್.ರಂಗನಾಥ್ ಅವರು ಈ ಕೃತಿಗೆ ಮುನ್ನುಡಿ ಬರೆದಿದ್ದಾರೆ. ಉದಾತ್ತ ಚಿಂತನೆಗಳನ್ನು ಓದಬಯಸುವವರ ಬಳಿ ಇರಲೇಬೇಕಾದ ಸಂಗ್ರಾಹ್ಯ ಗ್ರಂಥವಿದು.